ಓ ಎಸ್ ನಂಃ 278/2019
ಡಿ ಡಬ್ಲ್ಯೂ ಃ 1

ದಿಃ 18.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಕೆ ಎಲ್ ಎಸ್ ವಕೀಲರಿಂದಃ**

ವಾದಿಗಳು ತಮ್ಮನ್ನು ಕುರಿತು ನಿಪಿ 1 ರ ಕ್ರಯದ ಕರಾರು ಪತ್ರದಂತೆ ಕ್ರಯ ಪತ್ರವನ್ನು ಬರೆದುಕೊಡುವಂತೆ ಎಷ್ಟು ಬಾರಿ ಕೇಳಿರುತ್ತಾರೆ ಎಂದರೆ ಸಾಕ್ಷಿಯು ವಾದಿಗಳು ನಮ್ಮ ಬಳಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ನಿಪಿ 4 ರಂತೆ ತಮಗೆ ನೋಟಿಸ್ ನ್ನು ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 11 ರಿಂದ 14 ರ ಅಂಚೆ ಸ್ವೀಕೃತಿಯಲ್ಲಿರುವ ಸಹಿಗಳು ನಮ್ಮದಲ್ಲ (ಪ್ರತಿವಾದಿಗಳು). ನಿಪಿ 1 ರ ಕ್ರಯದ ಕರಾರು ಪತ್ರದಲ್ಲಿರುವ ಸಹಿಗಳು ಪ್ರತಿವಾದಿಗಳದ್ದು ಎಂದರೆ ಸರಿ. ನಿಪಿ 1 ರ ದಾಖಲಾತಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುವ ಕೆಂಪಯ್ಯ ಮತ್ತು ಮಹದೇವಯ್ಯ ರವರು ತಮ್ಮ ಊರಿನವರು ಎಂದರೆ ಸರಿ. ತಾವೇ ಸದರಿ ಸಾಕ್ಷಿದಾರರನ್ನು ಕರೆಸಿ ನಿಪಿ 1 ರ ದಾಖಲಾತಿಗೆ ಸಾಕ್ಷಿದಾರರಾಗಿ ಸಹಿಯನ್ನು ಮಾಡಿಸಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ರ ಕ್ರಯದ ಕರಾರು ಪತ್ರವನ್ನು ನೋಂದಣಿ ಮಾಡುವ ಸಮಯದಲ್ಲಿ ಅಲ್ಲಿ ಯಾರು ಯಾರು ಹಾಜರಿದ್ದರು ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ. ನಿಪಿ 1 ರ ದಾಖಲಾತಿಗೆ ತಾವು ಎಲ್ಲಿ ತಮ್ಮ ಸಹಿಯನ್ನು ಮಾಡಿದ್ದೀರಿ ಎಂದರೆ ನನಗೆ ಈಗ ನೆನಪಿಲ್ಲ. ತಮ್ಮ ತಂದೆಯು ಮರಣ ಹೊಂದಿದ ನಂತರ ದಾವಾ ಸ್ವತ್ತಿನ ಖಾತೆಯು ತಮ್ಮ ತಾಯಿಯವರ ಹೆಸರಿನಲ್ಲಿದೆ ಎಂದರೆ ಸರಿ. ವಾದಿಗಳು ತಮಗೆ ನೀಡಿರುವ ನೋಟಿಸ್‌ಗೆ ತಾವೇನಾದರೂ ಜವಾಬನ್ನು ನೀಡಿದ್ದೀರ ಎಂದರೆ ಸಾಕ್ಷಿ ನನಗೆ ನೆನಪಿಲ್ಲ. ನಿಪಿ 15 ರ ದಾಖಲಾತಿಯಲ್ಲಿರುವ ಹೆಬ್ಬೆಟ್ಟಿನ ಗುರುತು ತಮ್ಮ ತಾಯಿಯವರದ್ದು ಎಂದರೆ ನನಗೆ ಗೊತ್ತಿಲ್ಲ. ನಿಪಿ 15 ರ ದಾಖಲಾತಿಯಲ್ಲಿರುವ ಹೆಬ್ಬೆಟ್ಟಿನ ಗುರುತು ಮತ್ತು ಸಹಿ ತಮ್ಮದು ಎಂದರೆ ಸರಿಯಲ್ಲ. ನಿಪಿ 15 ರ ದಾಖಲಾತಿಗೆ ತಮ್ಮ ಶ್ರೀಮತಿಯವರು ಸಹ ಹೆಬ್ಬೆಟ್ಟಿನ ಗುರುತನ್ನು ಹಾಕಿ ಅವರ ಸಹಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 16 ರ ಋಣಭಾರ ರಾಹಿತ್ಯ ಪತ್ರದಲ್ಲಿ ವಾದಿಗಳ ಹೆಸರು ನಮೂದಾಗಿದ್ದು ಸದರಿ ವಿಚಾರವನ್ನು ತಾವೇನಾದರೂ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿದ್ದೀರ ಎಂದರೆ ಸಾಕ್ಷಿಯು ಸದರಿ ವಿಚಾರ ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ತಾವು ವಾದಿಗಳ ಸ್ವಾಧೀನಾನುಭವಕ್ಕೆ ತೊಂದರೆ ನೀಡಿದ್ದು ಸದರಿ ವಿಚಾರವಾಗಿ ವಾದಿಗಳು ತಮ್ಮ ವಿರುದ್ಧ ಖಾಸಗಿ

**ಓ ಎಸ್ ನಂಃ 278/2019**
**ಡಿ ಡಬ್ಲ್ಯೂ ಃ 1**

ಫಿರ್ಯಾದನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಗಳು ತಮ್ಮ ವಿರುದ್ಧ ಎಷ್ಟು ಬಾರಿ ತಮ್ಮ ವಿರುದ್ಧ ದೂರುಗಳನ್ನು ದಾಖಲು ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ. ತಾವು ಎಷ್ಟು ಬಾರಿ ಪೋಲಿಸ್ ಠಾಣೆಗೆ ಹೋಗಿ ಎಷ್ಟು ಬಾರಿ ತಮ್ಮ ಹೇಳಿಕೆಯನ್ನು ನೀಡಿದ್ದೀರಿ ಎಂದರೆ ಸಾಕ್ಷಿ ನನಗೆ ನೆನಪಿಲ್ಲ. ಸಾಮಾನ್ಯ ಮುಕ್ತರ್ ನಾಮೆ ಹಾಗೂ ಕ್ರಯದ ಕರಾರು ಪತ್ರವನ್ನು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳಾದ ನೀವು ವಾದಿಗಳಿಗೆ ಬರೆದುಕೊಟ್ಟಿರುತ್ತೀರಿ ಸದರಿ ದಾಖಲಾತಿಗಳ ಅನ್ವಯ ವಾದಿಗಳು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ನಿಪಿ 15 ರ ದಾಖಲಾತಿಯ ಪ್ರಕಾರ ತಮ್ಮ ತಂದೆಯವರು ಮರಣ ಹೊಂದಿದ ನಂತರ ಪ್ರತಿವಾದಿಗಳಾದ ನೀವು ವಾದಿಗಳ ಕಡೆಯಿಂದ ರೂ. 3 ಲಕ್ಷದ 65 ಸಾವಿರ ಹಣವನ್ನು ಪಡೆದಿದ್ದೀರಿ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ತಮಗೆ ಗೊತ್ತಿದ್ದರು ಸಹ ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ತಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**